ಪ್ರೈವೇಟ್ ಕಾಲೇಜುಗಳಲ್ಲಿ ಯಾರು actual ಆಗಿ ಇರುತ್ತಾರೋ, ಅವರನ್ನು ಬಿಟ್ಟು ಬೇರೆಯವರನ್ನು ನೇಮಕಾತಿ ಮಾಡಲು ಪ್ರಸ್ತಾವನೆ ಕಳುಹಿಸುವುದು ಇದೆ. ಅದೆಲ್ಲಾ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ : ಜಿಲ್ಲಾ ಪಂಚಾಯಿತಿಗಳಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ಬಗ್ಗೆ

96(1196) ಶ್ರೀ.ಬಸವರಾಜು. ಹೆಚ್.ಡಿ.(ವಿರಾಜಪೇಟೆ) ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಹಾಗೂ ಗ್ರಾಮಪಂಚಾಯ್ತಿಗಳಿಗೆ ನಿಗಧಿಯಾದ ಹಣ ಎಷ್ಟು, ಬಿಡುಗಡೆಯಾದ ಹಣ ಎಷ್ಟು, ಇದರಲ್ಲಿ ವೆಚ್ಚವಾಗಿರುವ, ಬಾಕಿ ಉಳಿದಿರುವ ಹಣವೆಷ್ಟು;

ಆ. ಈ ಮೇಲಿನೆಲ್ಲಾ ಪಂಚಾಯಿತಿಗಳ ಕಾಮಗಾರಿಗಳಲ್ಲಿ ಪೂರ್ಣಗೊಂಡಿರುವ, ಪೂರ್ಣಗೊಳ್ಳದಿರುವುದೆಷ್ಟು (ಜಿಲ್ಲಾವಾರು ವಿವರ ನೀಡುವುದು);

ಇ. ಸದರಿ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರ, ಅಕ್ರಮಗಳು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಬಂದಿದ್ದಲ್ಲಿ, ಈ ಎಲ್ಲಾ ಅಕ್ರಮಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ. ಅವ್ಯವಹಾರಕ್ಕೊಳಗಾಗಿರುವ ಹಣ ಎಷ್ಟು;

ಊ. ತಪ್ಪಿತಸ್ಥರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆಯೇ;

ಋ. ಈ ಕುರಿತು ತನಿಖೆ ನಡೆಸಲಾಗಿದೆಯೇ; ನಡೆಸಿದ್ದಲ್ಲಿ ಯಾವ ಹಂತದಲ್ಲಿದೆ ?

ಶ್ರೀ.ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು)

ಅ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳು ಅವುಗಳಿಂದ ಅನುಮೋದಿತವಾದ ವಾರ್ಷಿಕ ಕ್ರಿಯಾ ಯೋಜನೆಯನ್ವಯ ವಿವಿಧ ಇಲಾಖೆಗಳ/ವಲಯಗಳ ಅಡಿಯಲ್ಲಿ 654 ಯೋಜನೆಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿವೆ. 27 ಜಿಲ್ಲಾ ಪಂಚಾಯತ್‌ಗಳು, 176 ತಾಲ್ಲೂಕು ಪಂಚಾಯತ್‌ಗಳು ಮತ್ತು 5653 ಗ್ರಾಮ ಪಂಚಾಯತ್‌ಗಳು ಕಳೆದ 3 ವರ್ಷಗಳಲ್ಲಿ ಪೂರ್ಣಗೊಳಿಸಿರುವ, ಪೂರ್ಣಗೊಳ್ಳದಿರುವ ಕಾಮಗಾರಿಗಳ ವಿವರಗಳು ಈ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.

ಇ. ಹೌದು.

ಈ. ಸರ್ಕಾರದ ಗಮನಕ್ಕೆ ಬಂದಿರುವ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿ ಅಧಿಕಾರಿ/ನೌಕರರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುತ್ತಿದೆ.

ಉ. ಸರ್ಕಾರದ ಕ್ರಮ ಪ್ರಾರಂಭಿಸಿದ ಪ್ರಕರಣಗಳಲ್ಲಿ ಅವ್ಯವಹಾರಕ್ಕೊಳಗಾದ ಮೊತ್ತ ರೂ. 4,84,21,876–00 ಇರುತ್ತದೆ.

ಊ. 58 ಪ್ರಕರಣಗಳಲ್ಲಿ ರೂ.73,23,985/–ವಸೂಲಾತಿಗೆ ಆದೇಶಿಸಲಾಗಿದೆ.

29 ಅಧಿಕಾರಿ ಮತ್ತು ನೌಕರರಿಗೆ ನಿವೃತ್ತಿ ವೇತನವನ್ನು ತಡೆ ಹಿಡಿಯುವ ದಂಡನೆ ವಿಧಿಸಿದೆ.

2 ನೌಕರರನ್ನು ಸೇವೆಯಿಂದ ವಜಾ ಮಾಡಲಾಗಿದೆ.

37 ಅಧಿಕಾರಿ/ನೌಕರರ ವೇತನವನ್ನು ಕನಿಷ್ಠ ಹಂತಕ್ಕೆ ಇಳಿಸಲಾಗಿದೆ.

ಋ. ಉತ್ತರಗಳನ್ನು (ಈ) ಯಿಂದ (ಊ) ರಲ್ಲಿ ನೀಡಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ವಿಧಾನ ಸಭೆಯ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1196ಕ್ಕೆ ಅನುಬಂಧ)

(ರೂ: ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಪಂಚಾಯತ್‌ಗಳು	ವರ್ಷಗಳು		
		2001-02	2002-03	2003-04
	ಜಿಲ್ಲಾ ಪಂಚಾಯತ್‌ಗಳು			
ಅ	ನಿಗಧಿಯಾದ ಹಣ	1843.40	1846.70	1921.01
ಬ	ಬಿಡುಗಡೆಯಾದ ಹಣ	1653.59	1715.08	1793.69
ಕ	ವೆಚ್ಚ	1596.59	1553.24	1779.65
ಡ	ಬಾಕಿ ಉಳಿದ ಹಣ	57.00	161.84	14.04
	ತಾಲ್ಲೂಕ ಪಂಚಾಯತಿಗಳು			
ಅ	ನಿಗಧಿಯಾದ ಹಣ	2672.70	2503.70	2640.31
ಬ	ಬಿಡುಗಡೆಯಾದ ಹಣ	2393.36	2362.05	2647.07
ಕ	ವೆಚ್ಚ	2310.98	2231.21	2612.88
ಡ	ಬಾಕಿ ಉಳಿದ ಹಣ	82.38	130.84	34.19
	ಗ್ರಾಮ ಪಂಚಾಯತಿಗಳು			
ಅ	ನಿಗಧಿಯಾದ ಹಣ	312.21	339.99	335.82
ಬ	ಬಿಡುಗಡೆಯಾದ ಹಣ	304.61	277.82	304.80
ಕ	ವೆಚ್ಚ	282.18	246.39	291.73
ಡ	ಬಾಕಿ ಉಳಿದ ಹಣ	22.43	31.43	13.07

ಶ್ರೀ ಹೆಚ್.ಡಿ.ಬಸವರಾಜು : ಮಾನ್ಯ ಅಧ್ಯಕ್ಷರೆ, ನಾನು ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳಿಗೆ ನಿಗದಿಯಾದ ಹಣ ಎಷ್ಟು? ಬಿಡುಗಡೆಯಾದ ಹಣ ಎಷ್ಟು? ಇದರಲ್ಲಿ ವೆಚ್ಚವಾಗಿರುವ, ಬಾಕಿ ಉಳಿದಿರುವ

ಹಣವೆಷ್ಟು ಎಂಬ ಪ್ರಶ್ನೆ ಕೇಳೀದ್ದೇನೆ. ನನಗೆ ಒಂದು ಪ್ರಶ್ನೆ ಅರ್ಥವಾಗುತ್ತಿಲ್ಲ. ನಿಗದಿ ಮಾಡಿದ ಮೇಲೆ ನೀವೇಕೆ ಹಣವನ್ನು ಬಿಡುಗಡೆ ಮಾಡುವುದಿಲ್ಲ? ಅದು ನಿಮ್ಮ ಜವಾಬ್ದಾರಿಯಲ್ಲವೇ? ಯಾವ ಆಧಾರದ ಮೇಲೆ ನಿಗದಿ ಮಾಡುತ್ತೀರಿ? ಕೆಲವು ಅಂಕಿ ಅಂಶಗಳನ್ನು ನಾನು ತಮಗೆ ಕೊಡುತ್ತೇನೆ. ಇದರಿಂದ ನಾನು ಮಾತನಾಡುವುದು ಒಂದೆರಡು ನಿಮಿಷ ಹೆಚ್ಚಿಗೆ ಆಗಬಹುದು. ಆದರೂ ಅದಕ್ಕೆ ತಾವು ಅನುಮತಿ ಕೊಡಬೇಕೆಂದು ಕೋರುತ್ತೇನೆ. 27 ಜಿಲ್ಲಾ ಪಂಚಾಯಿತಿಗಳಿಗೆ 2001–02ರಲ್ಲಿ 1843.40 ಕೋಟಿ ರೂ.ಗಳನ್ನು ನಿಗದಿ ಮಾಡಿದ್ದೀರಿ. ಅದಕ್ಕೆ ಬಿಡುಗಡೆ ಮಾಡಿದ್ದು ಎಷ್ಟು? 1653.59 ಕೋಟಿ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. 189.81 ಕೋಟಿ ರೂ.ಗಳಿಗೆ ಅವರು ಕೆಲಸಗಳನ್ನು ಹಾಕಿಕೊಂಡಿದ್ದರು. ಆದರೆ ಅವರು ಅದನ್ನು ಮಾಡಲು ಸಾಧ್ಯವಾಗಲೇ ಇಲ್ಲ. ಏಕೆಂದರೆ, ಅದಕ್ಕೆ ಅವರಿಗೆ ಹಣವೇ ಬಿಡುಗಡೆಯಾಗಲಿಲ್ಲ. ಈ ರೀತಿ ಏಕೆ ಮಾಡುತ್ತೀರಿ? 2002–03ರಲ್ಲಿ 1846.70 ಕೋಟಿ ರೂ.ಗಳ ಹಣವನ್ನು ನೀವು ನಿಗದಿ ಮಾಡಿದ್ದಿರಿ. ಅದರಲ್ಲಿ ಬಿಡುಗಡೆ ಮಾಡಿದ್ದು ಕೇವಲ 1715.08 ಕೋಟಿ ರೂ.ಗಳನ್ನು ಮಾತ್ರ. ಅಂದರೆ ಉಳಿಕೆ 131.62 ಕೋಟಿ ರೂ.ಗಳಿಗೆ 2002–03ಕ್ಕೆ ಅವರು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದರಲ್ಲಾ, ಅವರೇನು ಮಾಡಬೇಕು? ಏಕೆ ಈ ತರಹ ಮಾಡುತ್ತಿದ್ದೀರಿ? ಇನ್ನು 2003–04ಕ್ಕೆ ಬಂದರೆ, 1921.01 ಕೋಟಿ ರೂ.ಗಳು ನಿಗದಿ ಮಾಡಿ ಅದರಲ್ಲಿ 1793.69 ಕೋಟಿ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. ಉಳಿದ ಕೊರತೆ 127.32 ಕೋಟಿ ರೂ.ಗಳಾಯಿತು. ಅಂದರೆ ಈ ಮೂರು ವರ್ಷಗಳಲ್ಲಿ 448.75 ಕೋಟಿ ರೂ.ಗಳನ್ನು ನಿಗದಿ ಮಾಡಿದ್ದರಲ್ಲಿ ಬಿಡುಗಡೆ ಮಾಡಲಿಲ್ಲವೆಂದರೆ, ಜಿಲ್ಲಾ ಪಂಚಾಯಿತಿಗಳಲ್ಲಿ ಅಭಿವೃದ್ಧಿ ಹೇಗಾಗುತ್ತದೆ? ಅದೇ ತರಹ ತಾಲ್ಲೂಕು ಪಂಚಾಯಿತಿಗೆ ಬರುವುದಾದರೆ, ಅಲ್ಲಿಗೆ ನಿಗದಿ ಮಾಡಿದ್ದೆಷ್ಟು? ಬಿಡುಗಡೆ ಮಾಡಿದ್ದೆಷ್ಟು ಎಂಬ ವಿವರಗಳನ್ನು ಮಾನ್ಯ ಸಚಿವರು ಒದಗಿಸಿದ್ದಾರೆ. ಆ ವಿವರಗಳನ್ನು ಮತ್ತೊಮ್ಮೆ ನಾನಿಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. ಏಕೆಂದರೆ ಅದರಿಂದ ಹೆಚ್ಚು ಸಮಯ ವ್ಯಯವಾಗುತ್ತದೆ. ಅದರಲ್ಲಿ 412.33 ಕೋಟಿ ರೂ.ಗಳಷ್ಟು ಹಣವನ್ನು ನಿಗದಿ ಪಡಿಸಿದ್ದರಲ್ಲಿ ನೀವು ಬಿಡುಗಡೆಯನ್ನೇ ಮಾಡಲಿಲ್ಲ. ಹೀಗಾದರೆ ತಾಲ್ಲೂಕು ಪಂಚಾಯಿತಿಗಳಲ್ಲಿ ಅಭಿವೃದ್ಧಿ ಹೇಗಾಗುತ್ತದೆ? ಅಲ್ಲಿಂದ ಗ್ರಾಮ ಪಂಚಾಯಿತಿಗೆ ಹೋಗೋಣ. 5653 ಗ್ರಾಮ ಪಂಚಾಯಿತಿಗಳಿಗೆ ನೀವು ನಿಗದಿ ಮಾಡಿದ ಹಣದಲ್ಲಿ 100.79 ಕೋಟಿ ರೂ.ಗಳ ಹಣವನ್ನು ಬಿಡುಗಡೆ ಮಾಡಲಿಲ್ಲವೆಂದರೆ, ಅಲ್ಲಿ ಹೇಗೆ ಅಭಿವೃದ್ಧಿಯಾಗುತ್ತದೆ? ಇದನ್ನು ನೀವು ಯಾವ ರೀತಿಯಾಗಿ ಸಮರ್ಥನೆ ಮಾಡಿಕೊಳ್ಳುತ್ತೀರಿ? ದಯವಿಟ್ಟು ಮಾನ್ಯ ಸಚಿವರು ಇದಕ್ಕೆ ಸರಿಯಾದ ಮಾಹಿತಿಯನ್ನು ಕೊಡಬೇಕು.

ಶ್ರೀ ಎಂ.ಪಿ.ಕುಮಾರ ಸ್ವಾಮಿ : ಮಾನ್ಯ ಅಧ್ಯಕ್ಷರೆ, ಮೂರು ಹಂತದ ಸ್ಥಳೀಯ ಸಂಸ್ಥೆಗಳಲ್ಲಿ ಯಾವುದಾದರೂ ಒಂದನ್ನು ರದ್ದುಗೊಳಿಸಬೇಕಾಗುತ್ತದೆ. .....

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರ ಕೊಡಲಿ. ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಎಂ.ಪಿ.ಕುಮಾರ ಸ್ವಾಮಿ : ನನ್ನ ಪ್ರಶ್ನೆಗೂ ಸೇರಿಸಿ ಮಾನ್ಯ ಮಂತ್ರಿಗಳು ಒಟ್ಟಿಗೆ ಉತ್ತರ ಕೊಡಲಿ. ಗ್ರಾಮ ಪಂಚಾಯತ್‌ಗಳಿಗೆ 5 ಲಕ್ಷ ರೂ.ಗಳನ್ನು ನಿಗದಿ ಮಾಡಿ 1 ಲಕ್ಷ ರೂ.ಗಳನ್ನೂ ಸಹ ಕೊಟ್ಟಿಲ್ಲ. ಮೂರು ಹಂತದ ಸ್ಥಳೀಯ ಸಂಸ್ಥೆಗಳನ್ನು ಇಟ್ಟು .....

ಅಧ್ಯಕ್ಷರು : ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ಮಾನ್ಯ ಸಚಿವರು ಉತ್ತರ ಹೇಳಲು ಅವಕಾಶ ಮಾಡಿಕೊಡಿ.

ಡಾ: ಹೆಚ್.ಸಿ.ಮಹದೇವಪ್ಪ : ಸನ್ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳು ತಮ್ಮ ತಮ್ಮ ಕ್ರಿಯಾ ಯೋಜನೆಗಳನ್ನು ತಯಾರು ಮಾಡುತ್ತವೆ. ಆ ಕ್ರಿಯಾ ಯೋಜನೆಗಳಿಗೆ ಅನುಗುಣವಾಗಿ ಹಣವನ್ನು ಹೊಂದಾಣಿಕೆ ಮಾಡಿಕೊಂಡು ಬಿಡುಗಡೆ ಮಾಡತಕ್ಕಂಥ ಸಂದರ್ಭದಲ್ಲಿ ಕ್ರಿಯಾ ಯೋಜನೆಯನ್ನು ನಿರ್ದಿಷ್ಟವಾದಂತಹ ಕಾಲಮಿತಿಯೊಳಗೆ ಅವರು ಪೂರೈಸದಿದ್ದರೆ, ಹಣವನ್ನು ಅವರು ಖರ್ಚು ಮಾಡುವುದಕ್ಕಾಗಿದಿದ್ದರೆ, ಮತ್ತೆ ಅದನ್ನು ಕೊಡಲಿಕ್ಕಾಗುವುದಿಲ್ಲ. ಅವರು ಏನು ಕ್ರಿಯಾ ಯೋಜನೆಯನ್ನೂ ತಯಾರು ಮಾಡುತ್ತಾರೆ, ಹಾಗೆ ಕ್ರಿಯಾ ಯೋಜನೆಯನ್ನೂ ತಯಾರು ಮಾಡುವಾಗ ಶಾಸಕರೂ ಕೂಡ ಅದರಲ್ಲಿ ಇರುತ್ತಾರೆ. ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಕೂಡ ಕ್ರಿಯಾ ಯೋಜನೆ ಬಗ್ಗೆ ತಿಳಿದುಕೊಳ್ಳುವುದಕ್ಕೆ ಅವಕಾಶ ಇದೆ. ಕ್ರಿಯಾ ಯೋಜನೆಗಳ ಮುಖಾಂತರ ಇವತ್ತು ಏನು ಕಾರ್ಯಕ್ರಮಗಳು ಅನುಷ್ಠಾನವಾಗಬೇಕು. ಅವು ಅನುಷ್ಠಾನ ಆಗುವ ಸಂದರ್ಭದಲ್ಲಿ ನಿಗದಿತ ಅವಧಿಯಲ್ಲಿ ಕೆಲಸ ಕಾಮಗಾರಿ ಪೂರ್ಣಗೊಳಿಸಿದರೆ ಹಣ ಬಿಡುಗಡೆ ಮಾಡುವುದಕ್ಕೆ ತೊಂದರೆ ಇರುವುದಿಲ್ಲ. ಬಹುತೇಕ ಹಣವನ್ನು ನಾವು ಕೊಟ್ಟಿದ್ದೇವೆ. ಮುಂದಿನ ಸಾಲಿನಿಂದ ನಿಗದಿತ ಅವಧಿಯಲ್ಲಿ ಆಯವ್ಯಯ ಮಂಡನೆ ಆದ ತಕ್ಷಣ ಕೂಡಲೇ ಮೂರು-ನಾಲ್ಕು ಹಂತಗಳಲ್ಲಿ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರು ಮಾಡಿ ಆದಷ್ಟು ಬೇಗ ನಿಗದಿತ ಹಣವನ್ನು ಗ್ರಾಮ ಪಂಚಾಯಿತಿಗಳು ಹಾಗೂ ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳು ಸಮರ್ಪಕವಾಗಿ ಬಳಸಲಿಕ್ಕೆ, ನೂರಕ್ಕೆ ನೂರರಷ್ಟು ವೆಚ್ಚ ಮಾಡುವುದಕ್ಕೆ ಸರ್ಕಾರ ತೀವ್ರವಾದ ಆಲೋಚನೆಯಲ್ಲಿ ಕ್ರಮ ಕೈಗೊಳ್ಳುತ್ತದೆ ಎಂದು ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಹೆಚ್.ಸಿ.ಬಸವರಾಜು : ಮಾನ್ಯ ಸಚಿವರು ಹೇಳಿದ್ದು ನನಗೆ ಅರ್ಥವಾಗುತ್ತಿಲ್ಲ. ನೀವು ನಿಗದಿ ಮಾಡಿದ್ದೀರಿ. ನಿಗದಿ ಮಾಡಿದ ಅಷ್ಟೂ ಹಣ ಬಿಡುಗಡೆ ಮಾಡಲಿಲ್ಲ ಎಂದರೆ, ಕ್ರಿಯಾ ಯೋಜನೆ ಕಾರ್ಯಗತ ಮಾಡಲಿಲ್ಲವೆಂದು ಹೇಳುತ್ತೀರಿ. ನೀವು ನಿಗದಿ ಮಾಡಿ ಕೊಟ್ಟ ಮೇಲೆ, ಕ್ರಿಯಾ ಯೋಜನೆ ಮಾಡಿದ ಮೇಲೆ ಹಣ ಬಿಡುಗಡೆ ಮಾಡಿದ ಮೇಲೆ ಅವರು ಕಾರ್ಯಗತ ಮಾಡುವುದಕ್ಕೆ ಆಗುವುದು. ಈ ರೀತಿ ಮೂರು ವರ್ಷಗಳಲ್ಲಿ ನೀವು ಎಷ್ಟು ಮಾಡಿದ್ದೀರಿ 961.87 ಕೋಟಿ ಹಣ ಬಿಡುಗಡೆ ಮಾಡಿಲ್ಲ. ಇದು ಸಾಮಾನ್ಯ ಮೊತ್ತ ಅಲ್ಲ. 961.87 ಕೋಟಿ ರೂಪಾಯಿ ನೀವು ಈ ಮೂರು ಹಂತಗಳಲ್ಲಿ ಬಿಡುಗಡೆ ಮಾಡಬೇಕಾದ ಹಣ. ಬಿಡುಗಡೆ ಮಾಡದೆ ಅಲ್ಲಿ ಅಭಿವೃದ್ಧಿ ಕೆಲಸಗಳು ಆಗಿಲ್ಲ. ನಿಗದಿ ಮಾಡುವುದಕ್ಕೆ ಅವರು ಯಾರೂ ಹೇಳಲಿಲ್ಲ. ಸರ್ಕಾರ ನಿಗದಿ ಮಾಡಿದ್ದು. ನಿಗದಿ ಮಾಡಿದ ಮೇಲೆ ಬಿಡುಗಡೆ ಮಾಡಬೇಕಾದುದು ನಿಮ್ಮ ಆದ್ಯಕರ್ತವ್ಯ.

ಡಾ.ಹೆಚ್.ಸಿ.ಮಹಾದೇವಪ್ಪ : ಸನ್ಮಾನ್ಯ ಅಧ್ಯಕ್ಷರೆ 2001-02ನೇ ಇಸವಿಯಲ್ಲಿ 1,843,4 ಕೋಟಿ ರೂಪಾಯಿಗಳು ನಿಗದಿಯಾಗಿದೆ. ಬಿಡುಗಡೆಯಾಗಿದ್ದು 1,653.59 ಕೋಟಿ ರೂಪಾಯಿಗಳು. ಕೆಲಸ ಆಗಲಿಲ್ಲ ಎಂದರೆ ಇದರಲ್ಲಿ ಸತ್ಯ ಇಲ್ಲ.

ಅಧ್ಯಕ್ಷರು : ಅವರು ಏನು ಹೇಳುತ್ತಿದ್ದಾರೆ ಎಂದರೆ, ಬಿಡುಗಡೆ ಆಗುತ್ತಿಲ್ಲ, ನೀವು ಎಷ್ಟು ಹಣ ನಿಗದಿ ಮಾಡುತ್ತೀರಿ ಅದು ಬಿಡುಗಡೆ ಆಗುತ್ತಿಲ್ಲ.

ಡಾ:ಹೆಚ್.ಸಿ.ಮಹಾದೇವಪ್ಪ : ನಿಗದಿ ಮಾಡಿದ ಹಣ ಬಿಡುಗಡೆ ಮಾಡಬೇಕೆಂದು ಹೇಳುತ್ತಿದ್ದಾರೆ. ಕ್ರಿಯಾ ಯೋಜನೆ ತಯಾರು ಮಾಡಿದಾಗ ಕ್ರಿಯಾ ಯೋಜನೆಗಳ ಮುಖಾಂತರ ಬಿಡುಗಡೆ ಮಾಡಿದ ಹಣವನ್ನು ಬಳಸಿಕೊಂಡು ಈ ಯೋಜನೆಗಳನ್ನು ಪೂರ್ಣಗೊಳಿಸಬೇಕಾಗುತ್ತದೆ. ಯಾವುದೇ ಕಾರ್ಯಕ್ರಮ ನೂರಕ್ಕೆ ನೂರರಷ್ಟು ಮುಟ್ಟಲಿಕ್ಕೆ ಸಾಧ್ಯವಿಲ್ಲ. ಆದರೆ ಅದು ಆಗಲೇ ಬೇಕೆಂದು ಸರ್ಕಾರದ ಉದ್ದೇಶ ಇರುತ್ತದೆ. ಕಾರ್ಯಕ್ರಮಗಳು ಉದ್ದೇಶ ಇರುತ್ತದೆ. ಮತ್ತು ಎಲ್ಲಾ ಸಂಸ್ಥೆಗಳ ಉದ್ದೇಶ ಆಗಿರುತ್ತದೆ. ಸರ್ಕಾರ ಅವರಿಗೆ ಅಗ್ರಹ ಪೂರ್ವಕವಾಗಿ ಮುಂದಿನ ವರ್ಷಗಳಲ್ಲಿ ಸೂಚನೆ ಕೊಡುತ್ತದೆ ಎಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರು ತಮ್ಮ ಪ್ರಶ್ನೆ ಕೇಳಿ, ದಯಮಾಡಿ ಕುಳಿತುಕೊಳ್ಳಿ. ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಗಿದೆ. ಒಂದು ಪ್ರಶ್ನೆಗೆ ಉತ್ತರ ಸಿಕ್ಕಿದರೆ ಹೇಗೆ? ಆರು ಗಂಟೆ ಒಳಗೆ ಎಲ್ಲಾ ಪ್ರಶ್ನೆಗಳನ್ನು ಮುಗಿಸಬೇಕು. ಎಲ್ಲಾ ಸದಸ್ಯರಿಗೂ ಅವರವರ ಪ್ರಶ್ನೆಗಳಿಗೆ ಉತ್ತರ ಬರಬೇಕು. ಏನಾದರೂ ಹೆಚ್ಚಿಗೆ ಸಮಸ್ಯೆ ಇದ್ದರೆ ನೀವು ಸಚಿವರ ಹತ್ತಿರ ಹೋಗಿ ಮಾತನಾಡಿ ನಿಮ್ಮ ಸಮಸ್ಯೆ ಪರಿಹಾರ ಮಾಡಿಕೊಳ್ಳಿ.

ಗ್ರಾಮೀಣ ಪ್ರದೇಶಗಳಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ.

97(1289) ಶ್ರೀರಾಮರೆಡ್ಡಿ ಜಿ.ವಿ(ಬಾಗೇಪಲ್ಲಿ) ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ. ಬೇಸಿಗೆ ಕಾಲ ಸಮೀಪಿಸುತ್ತಿರುವಂತೆ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ?

ಮಾನ್ಯ ಶ್ರೀ ಬಿ.ಸತ್ಯನಾರಾಯಣ. (ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು)

ಅ. ಬಂದಿದೆ.

ಆ. ಮುಂಬರುವ ಬೇಸಿಗೆಯಲ್ಲಿ ಸುಮಾರು 5000 ಜನವಸತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಬಹುದೆಂದು ಅಂದಾಜು ಮಾಡಲಾಗಿದೆ. ಈ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಆದ್ಯತೆ ಮೇಲೆ ನಿಭಾಯಿಸಲು ತಾಲ್ಲೂಕು ಮಟ್ಟದ ಕಾರ್ಯಪಡೆ ರಚಿಸಲಾಗಿದೆ ಹಾಗೂ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಕುಡಿಯುವ ನೀರಿನ ಸಮಸ್ಯೆಯನ್ನು ಸಮರ್ಥವಾಗಿ ಪರಿಹರಿಸಲು, ಮುಂದುವರಿದ ಯೋಜನೆಗಳ ಪ್ರಗತಿ ತೀವ್ರಗೊಳಿಸಲು, ಪೂರ್ಣಗೊಂಡಿರುವ ಯೋಜನೆಗಳನ್ನು ವಿದ್ಯುದ್ದಿಕರಣಗೊಳಿಸಿ ಕಾರ್ಯಗತಗೊಳಿಸಲು, ದುರಸ್ಥಿಗೊಳಗಾದ ಯೋಜನೆಗಳನ್ನು ಜಾಗ್ರತೆಯಾಗಿ ಸುಸ್ಥಿತಿಯಲ್ಲಿಡಲು, ಕೊಳವೆ ಬಾವಿಗಳ ಆಳ ಹೆಚ್ಚಿಸಲು, ಹೈಡ್ರೋಫ್ರಾಕ್ಟರಿಂಗ್ ಮಾಡಲು, ಮೋಟಾರ್‌ಪಂಪ್ ಅಳವಡಿಸಿ ಪುನಃಶ್ಚೇತನ ಕಾಮಗಾರಿಗಳನ್ನು ಕೈಗೊಳ್ಳಲು, ಅಗತ್ಯವಿರುವೆಡೆ ಹೊಸ ಕೊಳವೆ ಬಾವಿಗಳನ್ನು ಕೊರೆಯಲು, ಖಾಸಗಿ ಬೋರ್‌ವೆಲ್‌ಗಳನ್ನು ಚಾಲ್ತಿ ಅಂತರ್ಜಲ ಸಂರಕ್ಷಣಾ ಕಾಯಿದೆಯನ್ವಯ ಪರಿಹಾರ ನೀಡಿ ವಶಪಡಿಸಿಕೊಂಡು ನೀರು ಪೂರೈಕೆ ವ್ಯವಸ್ಥೆ ಮಾಡಲು ಮತ್ತು ತುರ್ತು ಸಂದರ್ಭಗಳಲ್ಲಿ